# ಗೊಲ್ಲರ ಹಟ್ಟಿಯಲ್ಲೊಂದು ಯುಗಾದಿ



**ಜಿ.ವಿ. ಆನಂದಮೂರ್ತಿ**

ಕಲೆ: ಮುರಳೀಧರ್ ರಾಥೋಡ್

ಕಳೆದ ವರ್ಷದ ಯುಗಾದಿಯ ದಿನ ನಾನು ಮತ್ತು ಗೋವಿಂದರಾಜು ಚಳ್ಳಕೆರೆ ಸಮೀಪದ ಖಂಡೇನಹಳ್ಳಿ ಗೊಲ್ಲರಹಟ್ಟಿಯಲ್ಲಿದ್ದೆವು. ಅದೇ ಸಂದರ್ಭದಲ್ಲಿ, 'ಮುಂದಿನ ಸಲ ಯುಗಾದಿಗೆ ನಮ್ಮ ಬೇವಿನಹಳ್ಳಿ ಗೊಲ್ಲರಹಟ್ಟಿಗೆ ಬನ್ನಿ. ನಮ್ಮ ಹಟ್ಟಿಯ ಮೂಡ್ಲು ಮಣೇವು ನೋಡಿವಿರಂತೆ' ಎಂದು ಅಲ್ಲಿಯೇ ಇದ್ದ ಹಿರಿಯ ಗೊಲ್ಲಗೌಡರೊಬ್ಬರು ನಮ್ಮಿಂದ ಬಲಗೈಲಿ ಭಾಷೆ ತಗೆದುಕೊಂಡು ಹೇಳಿದ್ದರು. ಅದರಂತೆ ಈ ಸಲದ ಯುಗಾದಿಯ ಹಿಂದಿನ ದಿನ ಬೇವಿನಹಳ್ಳಿಯ ಪೂಜಾರ ಚಿತ್ತಯ್ಯನವರು ಫೋನ್ ಮಾಡಿ, 'ವತ್ತಿನಂಟೆ ಬಂದ್ಬಿಡಿ ಸಾ' ಎಂದು ಗೋವಿಂದರಾಜುಗೆ ನೆನಪಿಸಿದರಂತೆ. ಅವರ ಅಕ್ಕರೆಯ ಮಾತಿಗೆ ಕಟ್ಟುಬಿದ್ದ ನಾನು ಗೋವಿಂದರಾಜು ಮತ್ತು ತಿಪ್ಪೇಸ್ವಾಮಿ ಶಿರಾ ಸಮೀಪದ ಬೇವಿನಹಳ್ಳಿ ಗೊಲ್ಲರಹಟ್ಟಿಗೆ ಹೊರಟೆವು.

ಬೇವಿನಹಳ್ಳಿ ಕಾಡುಗೊಲ್ಲರ ದೈವ ಜುಂಜಪ್ಪ ನಡೆದಾಡಿದ ನೆಲ. ಅವನ ತಂದೆ-ತಾಯಿಗಳು, ಜುಂಜಪ್ಪನ ಹುಟ್ಟು, ತಾರುಣ್ಯ, ಪಶುಪಾಲನೆ ಈ ಸಂಬಂಧವಾಗಿ ಜುಂಜಪ್ಪನ ಜೀವಿತದ ಘಟನೆಗಳು ನಡೆದದ್ದೂ ಇದೇ ಹಟ್ಟಿಯ ಹೊಲಮಾರೆಯಲ್ಲಿ. ಕೊನೆಗೆ ಅವನು ದೇಹ ಮಣ್ಣಿಗೆ ಸೇರಿದ್ದೂ ಇದೇ ಮಣ್ಣಿನಲ್ಲಿ. ಈಗಲೂ ಅವನ ಮತ್ತು ಅವನ ಸಹೋದರರ ಸಮಾಧಿ, ಅವನ ಪ್ರೀತಿಯ ಬಡಮ್ಮೈಲ ಹಾಗೂ ಜೂಲುನಾಯಿಯ ಸಮಾಧಿಗಳು ಬೇವಿನಹಳ್ಳಿಗೆ ಸಮೀಪದಲ್ಲಿವೆ. ಅದನ್ನು ಜುಂಜಪ್ಪನ ಗುಡ್ಡೆ ಎಂದು ಜನ ಕರೆಯುತ್ತಾರೆ. ವರ್ತಮಾನದ ತರತಮ ಭಾವಗಳ ಮನುಷ್ಯನ ಹೀನ ನಡೆಯ ಎಲ್ಲ ವ್ಯಾಧಿಗಳಿಂದ ದೂರವಾಗಿ, ಪರಂಪರೆಯೊಂದಿಗೆ ಶ್ರದ್ಧೆಯಿಂದ ಬದುಕುತ್ತಿರುವ ಕಾಡುಗೊಲ್ಲರ ಮುಖ್ಯ ಕೇಂದ್ರ ಬೇವಿನಹಳ್ಳಿ. ನಾವು ಬರುತ್ತಿದ್ದ ತಾವರೇಕೆರೆ ಮಾರ್ಗದ ಆ ಕಡೆ, ಈ ಕಡೆ ಮೈಯೆಲ್ಲಾ ಬೆಂಕಿ ಕೆಂಡದಂತೆ ಹೂತಳೆದ ಮುತ್ತುಗದ ಮರಗಳು, ಎಳೆ ಹಸುರಿನ ನರುಗಂಪಿನಿಂದ ಸೆಳೆಯುತ್ತಿದ್ದ ಮಾವಿನ ಮರಗಳು, ಹೂಕಚ್ಚಿದ ಬೇವಿನ ಮರಗಳನ್ನು ಕಣ್ಣು ಮಿಟುಕಿಸದೆ ನೋಡುತ್ತಾ ನಾವು ಜುಂಜಪ್ಪ ಬಾಳಿಬದುಕಿದ್ದ ಮಣ್ಣಿಗೆ ಸಮೀಪವಾದೆವು. ಇವನ್ನೆಲ್ಲಾ ನೋಡಿದಾಗ ನಮಗನಿಸಿದ್ದು; ಯುಗಾದಿ ಎಂದರೆ, ಅದು ರೈತರಿಗೆ ಸಂತಸ, ಸಡಗರ, ಆತ್ಮವಿಶ್ವಾಸ ಮತ್ತು ಚೈತನ್ಯ ತುಂಬುವ ಪ್ರಕೃತಿಯ ಹಬ್ಬವೆಂದು!

ನೋಡಿದರೆ ಆಕಾಶದಲ್ಲಿ ಗಾಬು ಮೋಡ, ಎತ್ತ ನೋಡಿದರೂ ಕೆಂಧೂಳು. ಚುರುಗುಡುವ ಯುಗಾದಿಯ ಉರಿಬಿಸಿಲಿಗೆ ತಲೆಕೊಟ್ಟು ಬೇವಿನಹಳ್ಳಿ ತಲುಪಿದೆವು. ಹಟ್ಟಿ ಪ್ರವೇಶಿಸುತ್ತಿದ್ದಂತೆಯೇ ಸ್ವರ್ಗದ ಬಾಗಿಲಿಗೇ ಬಂದಂತಾಯಿತು. ಸುಮಾರು 350 ಮನೆಗಳಿದ್ದ ಹಟ್ಟಿ ಇದು. ಕಾಡುಗೊಲ್ಲರ ಬೆಡುಗುಗಳಾದ ಮಾರನೋರು (ಕರಡಿಗೊಲ್ಲರು), ಅಜೇರು, ಅರೆನೇರು, ಹುಳ್ಳೇರ ಗೊಲ್ಲರು ಮತ್ತು ಒಂದೇ ಒಂದು ಕಂಬೇರಗೊಲ್ಲರು ಇರುವ ಹಟ್ಟಿ. ಸ್ವಲ್ಪಮಟ್ಟಿನ ಆಧುನಿಕತೆಗೆ ಹೊರಳಿಕೊಂಡಿದ್ದ ಹಟ್ಟಿಯಿದು. ಯಾವುದೇ ಹಟ್ಟಿ ಮುಂಬಾಗಿಲನ್ನು